ಯಕ್ಷಗಾನ ಪ್ರಸಂಗ

ಅಂಗಾರಪರ್ಣ

ಕವಿ

ಶ್ರೀಧರ ಡಿ. ಎಸ್.

ಅಂತರಜಾಲ ಆವೃತ್ತಿ ಪ್ರಕಾಶಕರು

ಯಕ್ಷವಾಹಿನಿ®, ಬೆಂಗಳೂರು

Email: yakshaprasangakosha@gmail.com

Blog: https://yakshaprasangakosha.blogspot.in

ಆವೃತ್ತಿ ೧.೦ ಮೇ ೩೦, ೨೦೧೭

ಸಾರಾಂಶ

ಪ್ರಸಂಗ ವಿಧ:
ಪೌರಾಣಿಕ

ಆಧಾರ ಗ್ರಂಥ:
ಮಹಾಭಾರತ

ಭಾಷೆ:
ಕನ್ನಡ

ಹಿಂದಿನ ಪ್ರಕಾಶನಗಳ ವಿವರ:
ಶ್ರೀ ದುರ್ಗಾಂಬಾ ಕಲಾಸಂಗಮ, ಶರವೂರು. ದ.ಕ.

ಹಕ್ಕುಸ್ವಾಮ್ಯ ವಿವರ:
ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

ಒಟ್ಟು ಪದ್ಯಗಳು:
35

ಪಾತ್ರಗಳು:
ಅಂಗಾರಪರ್ಣ, ಸಖಿಯರು, ಬ್ರಾಹ್ಮಣರು

ಕಥಾ ಸಾರಾಂಶ:
ಪಾಂಡವರು ಬ್ರಾಹ್ಮಣರಿಂದ ದ್ರೌಪದೀ ಸ್ವಯಂವರದ ಸುದ್ದಿ ತಿಳಿದು ಪಾಂಚಾಲ ದೇಶದ ಕಾಂಪಿಲ್ಯ ನಗರಕ್ಕೆ ಪ್ರಯಾಣಬೆಳೆಸುವುದು. ಮಾರ್ಗಮಧ್ಯೆ ರಾತ್ರಿಯ ವೇಳೆ ಚಿತ್ರರಥ (ಅಂಗಾರಪರ್ಣ) ಸಖೀ ಜನರೊಂದಿಗೆ ಜಲಕೇಳಿ ಮಾಡುವ ಸಮಯದಲ್ಲಿ ಪಾಂಡವರನ್ನು ಕಂಡು ಕೋಪದಿಂದ ತಡೆದು ಆಕ್ಷೇಪಿಸಿದಾಗ ಅರ್ಜುನನಿಗೂ ಆತನಿಗೂ ನಡೆದ ಕದನದಲ್ಲಿ ಅಂಗಾರ ಪರ್ಣನ ಸೋಲು. ಚಾಕ್ಷುಷೀ ವಿದ್ಯಾಪ್ರದಾನದ ಪ್ರಸ್ತಾಪ. ಕ್ಷತ್ರಿಯನಾಗಿ ತಾನು ಈ ದಾನವನ್ನು ಸ್ವೀಕರಿಸೆನೆಂದು ಅರ್ಜುನನಿಂದ ನಿರಾಕರಣೆ. ಕೊನೆಗೆ ಅಗ್ನಿಶರವನ್ನು ತಾನು ನೀಡಿ ಚಾಕ್ಷುಷಿಯನ್ನು ವಿನಿಮಯ ಮಾಡಿಕೊಳ್ಳುವ ಒಪ್ಪಂದ. ಮುಂದೆ ಅಂಗಾರಪರ್ಣನು ಪಾಂಡವರ ದುರ್ದೆಸೆಗೆ ಯೋಗ್ಯ ಪುರೋಹಿತರಿಲ್ಲದ ಕಾರಣವನ್ನು ಗುರುತಿಸಿ, ಸಂವರಣನ ಕತೆಯನ್ನು ಬೋಧಿಸಿ ಮುನಿಧೌಮ್ಯರನ್ನು ಪುರೋಹಿತರಾಗಿ ವರಣ ಮಾಡುವಂತೆ ಮಾರ್ಗದರ್ಶನ ಮಾಡುತ್ತಾನೆ.

ಕವಿ ಪರಿಚಯ:
ನಿವೃತ್ತ ಕನ್ನಡ ಉಪನ್ಯಾಸಕ. ಸಾಹಿತಿ, ಯಕ್ಷಗಾನ ಅರ್ಥಧಾರಿ ಮತ್ತು ಪ್ರಸಂಗ ಕರ್ತೃ. ಯಕ್ಷಗಾನ ವಿಮರ್ಶಕ. ಊರು-ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕು, ನಿಟ್ಟೂರು ಬಳಿಯ ಧರೇಮನೆ. ಕಳೆದ ಮೂವತ್ತಾರು ವರ್ಷಗಳಿಂದ ನೆಲೆಸಿರುವುದು ಮಂಗಳೂರು ತಾಲೂಕಿನ ಕಿನ್ನಿಗೋಳಿಯಲ್ಲಿ. ವಿದ್ಯಾರ್ಥಿ ದೆಸೆಯಿಂದಲೇ ಯಕ್ಷಗಾನದಿಂದ ಆಕರ್ಷಿತ. ವೇಷಧಾರಿಯಾಗಿ, ಅರ್ಥಧಾರಿಯಾಗಿ ಪಳಗಲು ವಿದ್ಯಾಭ್ಯಾಸ ಮಾಡಿದ ಉಡುಪಿ ಸಹಕಾರಿಯಾಯಿತು.

ಸುಮಾರು ಮೂವತ್ತೊಂದು ಯಕ್ಷಗಾನ ಪ್ರಸಂಗಗಳ ರಚಯಿತ. ಉಡುಪಿ ಯಕ್ಷಗಾನ ಕೇಂದ್ರ ಯಕ್ಷಗಾನ ಪ್ರಸಂಗ ಮಾಲಿಕಾ ಎಂಬ ಶೀರ್ಷಿಕೆಯಲ್ಲಿ ೧೩ ಪ್ರಸಂಗಗಳನ್ನು ಒಂದೇ ಕೃತಿಯಲ್ಲಿ ಪ್ರಕಟಿಸಿದೆ. ಯಕ್ಷಗಾನದ ಸುಮಾರು ನೂರಾಮೂವತ್ತು ಮಟ್ಟುಗಳನ್ನು ವಿವಿಧ ಪ್ರಸಂಗಗಳಲ್ಲಿ ಬಳಸಿಕೊಳ್ಳಲಾಗಿದೆ. ಪ್ರಸಂಗ ರಚನೆ ಮಾತ್ರವಲ್ಲದೆ, ಯಕ್ಷಗಾನ ಕ್ಷೇತ್ರಕ್ಕೆ ಸಂಬಂಧಿಸಿದ ನೂರಾರು ವಿಮರ್ಶೆಗಳು, ಚಿಂತನೆಗಳು ನಾಡಿನ ವಿವಿಧ ಪತ್ರಿಕೆಗಳಲ್ಲಿ, ಗ್ರಂಥಗಳಲ್ಲಿ ಪ್ರಕಟಗೊಂಡಿವೆ. ಕಿನ್ನಿಗೋಳಿಯ `ಯಕ್ಷಲಹರಿ' ಯಕ್ಷಗಾನ ಸಂಸ್ಥೆಯಲ್ಲಿ ೨೪ ವರ್ಷ ಕಾರ್ಯದರ್ಶಿಯಾಗಿ ಸೇವೆ. ಹಲವು ತಾಳಮದ್ದಲೆ ಸ್ಪರ್ಧೆಗಳನ್ನು, ಸಪ್ತಾಹಗಳನ್ನು ಆಯೋಜಿಸಿದ್ದಾರೆ. ಜೊತೆಗೆ, ವಿವಿಧ ಸಂಘ ಸಂಸ್ಥೆಗಳು ಆಯೋಜಿಸಿರುವ ಆಟ-ಕೂಟಗಳಲ್ಲಿ ಅವಲೋಕನಕಾರರಾಗಿ ಮತ್ತು ಗೋಷ್ಠಿ, ಕಮ್ಮಟಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಂಡ ಅನುಭವ. ಅರ್ಥಧಾರಿಯಾಗಿ ಸಾವಿರಾರು ಕೂಟಗಳಲ್ಲಿ ಭಾಗವಹಿಸುವಿಕೆ. ಎಲ್ಲ ಬಗೆಯ ಪಾತ್ರಗಳ ನಿರ್ವಹಣೆ. ಅವಧಾನಗಳಲ್ಲಿ ಪೃಚ್ಛಕರಾಗಿ, ಸಂಘ-ಸಂಸ್ಥೆಗಳ ಸಲಹೆಗಾರರಾಗಿ, ಶ್ರೀ ಗುರು ರಾಘವೇಂದ್ರ ಸಂಚಾರಿ ಯಕ್ಷಗಾನ ಮಂಡಳಿ ಹೊಸಬೆಟ್ಟು ಸುರತ್ಕಲ್ ಇದರ ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಣೆ.ಸಾಹಿತ್ಯದ ಇತರ ಪ್ರಕಾರಗಳಲ್ಲೂ ಆಸಕ್ತಿ. ರಾಜಕೀಯ ವಿಶ್ಲೇಷಣೆ, ರಂಗ ವಿಮರ್ಶೆ, ಲಲಿತ ಪ್ರಬಂಧ, ನಗೆ ಲೇಖನಗಳನ್ನು ಬರೆಯುವುದೂ ಹವ್ಯಾಸ. ಹಾಸ್ಯ ಬರಹ ಕುರಿತ ರಾಜ್ಯ ಮಟ್ಟದ ಸ್ಪರ್ಧೆಗಳಲ್ಲಿ ಬಹುಮಾನವೂ ಬಂದಿದೆ. 'ಬಸ್ಸು ಜಟಕಾ ಬಂಡಿ' ಎಂಬ ನಗೆ ಲೇಖನಗಳ ಪುಸ್ತಕ ಪ್ರಕಟಗೊಂಡಿದೆ. ಶ್ರೀರಾಮಚಂದ್ರಾಪುರ ಮಠದಿಂದ ಪ್ರಕಟಗೊಂಡ ಗುರುಗ್ರಂಥಮಾಲಿಕೆಯಲ್ಲಿ ಶುಕ್ರಾಚಾರ್ಯ, ದ್ರೋಣಾಚಾರ್ಯ, ಮಹಾಮುನಿ ಶುಕ ಎಂಬ ಮೂರು ಕೃತಿಗಳು ಪ್ರಕಟವಾಗಿವೆ. ಮಂಗಳೂರು ವಿಶ್ವವಿದ್ಯಾನಿಲಯದ ದ್ವಿತೀಯ ಬಿಕಾಂ ಪದವಿ ಕನ್ನಡ ಪಠ್ಯಪುಸ್ತಕದಲ್ಲಿ `ಮಹಾಪ್ರಸ್ಥಾನ' ಪ್ರಸಂಗದ ಪಾಂಡವ ಸ್ವರ್ಗಾರೋಹಣದ ಒಂದು ಭಾಗ ಪಠ್ಯವಾಗಿದೆ.

ಯಕ್ಷಗಾನ ಪತ್ರಿಕೆ `ಕಣಿಪುರ'ದಲ್ಲಿ ರಂಗಸ್ಥಳದ ಅಭಿಜಾತ ಕವಿಗಳು ಎಂಬ ಅಂಕಣವನ್ನು ಬರೆಯುತ್ತಿದ್ದು, ಇದರಲ್ಲಿ ಯಕ್ಷಗಾನ ಸುಪ್ರಸಿದ್ಧ ಕವಿಗಳ ಪರಿಚಯ ನೀಡಲಾಗುತ್ತಿದೆ. ಬೆಂಗಳೂರಿನ `ಸುದಿನ ಸುರಭಿ' ಪತ್ರಿಕೆಯಲ್ಲಿ `ಪುರಾಣ ಸ್ವಾರಸ್ಯಗಳು' ಎಂಬ ಅಂಕಣ ಬರಹ ಪ್ರಕಟಗೊಂಡಿದೆ. ಶ್ರೀ ರಾಮಚಂದ್ರಾಪುರ ಮಠದ `ಧರ್ಮಭಾರತೀ' ಮಾಸಪತ್ರಿಕೆಯಲ್ಲಿ `ವೀರತಪಸ್ವಿ' ಧಾರಾವಾಹಿಯಾಗಿ ಪ್ರಕಟವಾಗುತ್ತಿದೆ.

ಉಡುಪಿಯ ಯಕ್ಷಗಾನ ಕಲಾರಂಗ ಸಂಸ್ಥೆ ೨೦೧೫ನೇ ಸಾಲಿನ `ತಲ್ಲೂರು ಕನಕ ಅಣ್ಣಯ್ಯ' ಪ್ರಶಸ್ತಿ ನೀಡಿ ಗೌರವಿಸಿದೆ. ಜೊತೆಗೆ ಅವರ ಪ್ರಸಂಗಗಳ ಕುರಿತ ಸಾಹಿತ್ಯ-ಸಾಧನಾವಲೋಕನ, ಅವರ ಯಕ್ಷಗಾನ ಪ್ರಸಂಗಗಳ ವಸ್ತುವಿನ್ಯಾಸ-ಆಶಯ, ಛಂದಸ್ಸಿನ ಬಳಕೆ ಕುರಿತಾಗಿ ಯಕ್ಷ ವಿದ್ವತ್ ಲೋಕ ಭಾಷಣ-ಚರ್ಚೆಗಳನ್ನು ದಿನವಿಡೀ ನಡೆಸಿದ್ದು ಗಮನಾರ್ಹ. ಯಕ್ಷಗಾನ ಬಯಲಾಟ ಅಕಾಡೆಮಿ ಶ್ರೀಧರರ `ಯಕ್ಷಗಾನ ಪ್ರಸಂಗ ಮಾಲಿಕಾ' ಕೃತಿಗೆ ೨೦೧೧ನೇ ಸಾಲಿನ ಪುಸ್ತಕ ಪ್ರಶಸ್ತಿ ನೀಡಿ ಗೌರವಿಸಿದೆ. ಶಿವಮೊಗ್ಗದಲ್ಲಿ ೨೦೧೬ರ ಜನವರಿಯಲ್ಲಿ ನಡೆದ ಅಖಿಲ ಭಾರತ ೧೧ನೇ ಯಕ್ಷಗಾನ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು. ೨೦೧೬ರ ಫೆಬ್ರುವರಿ ತಿಂಗಳಲ್ಲಿ ಕೆರೆಮನೆಯಲ್ಲಿ ನಡೆದ `ಶಂಭುಹೆಗಡೆ ರಾಷ್ಟ್ರೀಯ ನಾಟ್ಯೋತ್ಸವ' ಕಾರ್ಯಕ್ರಮದಲ್ಲಿ ಸನ್ಮಾನಿಸಲ್ಪಟ್ಟಿದ್ದಾರೆ. `ಜಡಭರತ' ಪೌರಾಣಿಕ ಕಾದಂಬರಿ ಪ್ರಕಟಗೊಂಡಿದ್ದು,`ಅಸುರ ಗುರು' ಬೃಹತ್ ಕಾದಂಬರಿ ಪ್ರಕಟಣೆಗೆ ಸಿದ್ಧವಾಗಿದೆ.

ಶ್ರೀಧರ ಡಿ.ಎಸ್. ಅವರ ಯಕ್ಷಗಾನ ಕೃತಿಗಳು - ಕಬಂಧ ಮೋಕ್ಷ, ಸುದ್ಯುಮ್ನ, ಆದಿನಾರಾಯಣ ದರ್ಶನ, ಕುವಲಯಾಶ್ವ, ಗರುಡ ಪ್ರತಾಪ, ಬಾಲಭಾರತ, ಸತ್ವಶೈಥಿಲ್ಯ, ಮಹಾಪ್ರಸ್ಥಾನ, ಪರೀಕ್ಷಿತ-ಆಸ್ತೀಕಜನ್ಮ, ಜನಮೇಜಯ, ಶುಕ್ರಸಂಜೀವಿನೀ, ಅಗಸ್ತ್ಯ, ಜಡಭರತ, ಸಮ್ರಾಟ್ ಮರುತ್ತ, ಕುಜ್ರಂಭ ಕಂದರ, ಯಕ್ಷಪ್ರಶ್ನೆ, ಯೋಗಾವತಾರಂ, ಫಲ್ಗುಣೀ ತೀರ್ಥ ಮಹಿಮೆ, ವೀರ ಚಿತ್ರಧ್ವಜ, ಶ್ರೀರಂಗ ರಾಯಭಾರ, ನಾಲಾಯನೀ, ಬಕನ ಬಂಡಿ, ಅಂಗಾರಪರ್ಣ ವೃತ್ತಾಂತ, ಧೌಮ್ಯಪರಿಗ್ರಹ, ದ್ರೌಪದೀ ಸ್ವಯಂವರ, ದುರ್ಗಮಾಸುರ ವಧೆ, ಶರವೂರ ಶ್ರೀದುರ್ಗೆ, ಪೃಥುಯಜ್ಞ, ಹನ್ನಾರ ರಾಮೇಶ್ವರ ಮಹಾತ್ಮೆ, ನೈಮಿಷಾರಣ್ಯ ನಿರ್ಮಾಣ, ಸ್ವರ್ಣಕಮಲ

ಟಿಪ್ಪಣಿ:

ಯಕ್ಷರಂಗದಲ್ಲಿ ಸುಪರಿಚಿತ ಕಥೆ ಅಂಗಾರಪರ್ಣ ವೃತ್ತಾಂತ. ಇದು ಸಣ್ಣ ಪ್ರಸಂಗವಾದರೂ ಕಥಾನಕದ ಮುಂದಿನ ನಡೆಗೆ ಅನುಕೂಲವಾದ ನಡೆಗಳ ಕೊಂಡಿಯಾಗಿ ಮನೋಜ್ಞವಾಗಿದೆ.

ಜಲಕ್ರೀಡೆ ಇಲ್ಲಿಯ ಆಕರ್ಷಣೆಯ ದೃಶ್ಯ. ಅರ್ಜುನ ಅಂಗಾರಪರ್ಣ ಯುದ್ಧವೂ ಅಷ್ಟೇ ಮಹತ್ವದ್ದು. ಬಹು ಮುಖ್ಯ ವಿಚಾರ ಧೌಮ್ಯರನ್ನು ಗುರುವಾಗಿ ಸ್ವೀಕರಿಸಬೇಕೆಂಬ ಆತನ ಸಲಹೆ ಪಾಂಡವರ ಬದುಕಿಗೆ ಧರ್ಮದ ಪರಿವೇಷವನ್ನು ಭದ್ರಪಡಿಸಿತು.

ತಾಳಮದ್ದಲೆಗೂ ಹೊಂದುವ ವಿಚಾರಗಳ ಮಂಥನಕ್ಕೆ ಬೇಕಾದ ಅನೇಕ ಪದ್ಯಗಳಿದ್ದು, ಚಿಂತನೀಯ ವಿಚಾರಗಳಿವೆ. ಜಲಕ್ರೀಡೆಯಂತಹ ದೃಶ್ಯಗಳನ್ನು ಆಟಕ್ಕೆ ಇಟ್ಟು, ತಾಳಮದ್ದಲೆಗೆ ಬಿಟ್ಟು ಸೊಗಸಾಗಿ ನಿರ್ವಹಿಸಬಹುದು. ಎರಡೂ ಬಗೆಗೂ ಹೊಂದುವ ಕೃತಿ ಅಂಗಾರಪರ್ಣ.

ಪ್ರಸಂಗ ಸಾಹಿತ್ಯ

ಭಾಮಿನಿ
ನಿರ್ಮಲದ ನಡೆ ಬ್ರಾಹ್ಮ ಕ್ಷಾತ್ರಕೆ
ಧರ್ಮವೇ ಸರ್ವಸ್ವವೆಂಬುದ
ನುರ್ವಿಯಲಿ ಶ್ರುತ ಪಡಿಸಿ ಮೆರೆಸುವ ಸತ್ಯಕೆರಗುತಲಿ|
ಗುರ್ವನುಗ್ರಹ ಸರ್ವಕಾರಕ|
ಕರ್ಮವೇ ಕರ್ತವ್ಯವೆಂಬುದ|
ನಿರ್ವಹಿಸಿ ತೋರಿಸುವ ಶಕ್ತಿಗೆ ಮಣಿದು ಕೃತಿಯೊರೆವೆ|| ೦

ತುಜಾವಂತು||ಝಂಪೆ||
ಚಿತ್ರರಥನಂಗಾರಪರ್ಣ ಗಂಧರ್ವೇಶ
ಮತ್ತೇಭಗಮನೆಯರ ಮೊತ್ತದೊಡಗೂಡಿ||
ನೃತ್ಯಗಾನ ವಿನೋದ ಸತ್ವ ಸಾಹಸ ವೀರ|
ನರ್ತಿಯಿಂ ಪೊರವಂಟ ಜಲ ಕೇಳಿಗೆಳಸಿ||1|| ೧
ದೇವಗಂಗಾನದಿಯ ಸೋವನರಸುತ ಬಂದು|
ಹಾವಭಾವ ವಿಲಾಸ ವಿಭ್ರಮವ ತೋರಿ||
ಭೂವಲಯದೈಸಿರಿಯ ಕಣ್ತುಂಬುತಸ್ಮಮಯ|
ಕಾವನಿತೆಯರು ಸಹಿತ ಜಲಕೇಳಿಗಿಳಿದ||2|| ೨

ನವರೋಜು||ಏಕ||
ಹಾರಿದರೂ ಧುಮ್ಮಿಕ್ಕಿ| ಸುರ|
ನಾರಿಯರೂ ಬಲು ಸೊಕ್ಕಿ||
ಹಾರುತಲೇರುತ| ಜಾರುತ ಸಂತಸ|
ತೋರುತ ವಾರಿಯ| ಹಾರಿಸಿ ನಲಿಯುತ|| ಆಡಿದರೂ ತರುಣಿಯರು||
ಜಲ| ಕ್ರೀಡೆಯನೂ ಚದುರೆಯರು||1|| ೩
ಹಿಮ್ಮೊಗ ಮುಮ್ಮೊಗವೀಜಿ| ಜಲ|
ವಂಮೊಗೆದೂ ಮರೆಮಾಜಿ||
ಚಿಮ್ಮುತ ಕೆಮ್ಮುತ| ಸಮ್ಮತಗೊಳ್ಳುತ|
ಘಮ್ಮನೆ ಕಾಲೆಳೆ| ದೊಮ್ಮೊಗೆ ಬೀಳುತ|| ಆಡಿದರೂ||2|| ೪

ಸಾಂಗತ್ಯ||ರೂಪಕ||ಕಾಂಬೋಧಿ ಝಂಪೆ||
ಸಮೀಕೃತ ಬಂಧ
ಮತ್ಸ್ಯಾದಿ ದೇಶಗಳನುತ್ತರಿಸಿ ಪಾಂಚಾಲ|
ದುತ್ಸವೋತ್ಸುಕರೊಂದು ಗೂಡಿ||
ನಿತ್ಯಪಾವನೆ ಪುಣ್ಯ ದೇವಗಂಗಾನದೀ|
ಯುತ್ತರಾತೀರಕೈತಂದು||1|| ೫

ಭಾಮಿನಿ
ಗಂಗೆ ತುಂಗೆ ತರಂಗೆ ಪುಣ್ಯೋ|
ತ್ತುಂಗೆ ಸಾಗರ ಸಂಗೆ ಹರಿಪದ|
ಭೃಂಗೆ ಶಿವಶಿರರಂಗೆ ಕರುಣಾಪಾಂಗೆ ಸಲಿಲಾಂಗೆ||
ಮಂಗಲೆಯೆ ಬ್ರಹ್ಮಾಂಡ ಕವಚದ|
ಭಂಗದಿಂದೊಗೆದಳೆ ಭಗೀರಥ
ನಿಂಗೊಲಿದ ಮುನಿಜಂಘೆ ಜನ್ಮ ಶುಭಾಂಗೆ ದಯೆದೋರು||1|| ೬

ಸೌರಾಷ್ಟ್ರ||ತ್ರಿವುಡೆ||
ಸಲಿಲ ಕ್ರೀಡಾಸಕ್ತನಾಲಿಸಿ|
ಕಳಕಳವ ಭೂಸುರರು ಬರುತಿರೆ|
ಬಳಸಿದಬಲೆಯರುಗಳ ತೊರೆಯುತ| ಘಳಿಲನೆದ್ದ||1|| ೭
ರಾತ್ರಿಯೊಳು ಮಾನವರ ಚಾರಣ|
ಧಾತ್ರಿಗಿದು ಬಲು ಚಿತ್ರ ನಿಮಗಿದು|
ಯಾತ್ರೆಗನುಚಿತವೆಂದು ತಡೆದನು| ಚಿತ್ರರಥನು||2|| ೮

ಘಂಟಾರವ||ಅಷ್ಟ|| (ದೇಸಿ ಅಷ್ಟ)
ಆರೋ ನಮ್ಮ ವಿ| ಹಾರದೀ ಸಮಯದಿ
ಹಾರುವರು ಸಂ|ಚಾರಗೆಯ್ವ ವಿ | ಚಾರವಿದು ದುಷ್ಕಾರ್ಯವು||1|| ೯
ಅತ್ತ ಸಾರಿರೊ| ಮೃತ್ಯು ಮುಂಬಂದಿದೆ|
ಸುತ್ತುವರಿಗಿದು| ಹೊತ್ತೆ ವಿಪ್ರರ| ಮೊತ್ತವಿಲ್ಲೇಂ ಗೆಯ್ವುದು||2|| ೧೦

||ಕಂದ||
ಇರಿದೂರದೊಳೆಂದೊರೆಯುತ|
ಉರಿ ಪಂಜುಪಿಡಿದು ಪಾರ್ಥ ಮುಂದೈದೆಂದಂ||
ಗರುವದಿ ದಾರಿಯ ಕಟ್ಟುತ|
ಧರೆಯಮರರ ತಡೆವ ಧೈರ್ಯ ತೋರ್ದವನಾರೈ||1|| ೧೧

ಕೇದಾರಗೌಳ||ಝಂಪೆ||
ರಾತ್ರಿ ನಮ್ಮಯ ಕಾಲವು| ಬರುತಲೀ|
ಧಾತ್ರಿಯೊಳು ವಿಹರಿಸುವೆವು||
ಶ್ರೋತ್ರಿಯನ ತೆರದೊಳಿರುವೆ| ನೀವ್ ನದೀ|
ಪಾತ್ರಕೈದುವುದುಚಿತವೆ||1|| ೧೨
ಶರಧಿ ಹಿಮಗಿರಿ ಗಂಗೆಗು| ನಿರ್ಬಂಧ|
ವಿರದು ಪಗಲಿಗು ಬೈಗಿಗು||
ತರುಣಿಯರ ಜೊತೆಯೊಳಿರುವ| ಹಮ್ಮಿನಿಂ|
ದೊರೆಯದಿರು ತಡೆದ ನೆವವ||2|| ೧೩
ಮನುಜ ನೀ ಬಡ ಹಾರುವ| ಗಂಧರ್ವ|
ಗೆಣೆಯೆ ಬರಿ ಬಾಯ ಬಲವ||
ಗಣಿಸೆನಂಗಾರ ಪರ್ಣ| ಮಿತ್ರನಾ|
ಧನಪತಿಗೆ ಶೌರ್ಯಪೂರ್ಣ||3|| ೧೪

ಭೈರವಿ||ಅಷ್ಟ||
ಗಂಧರ್ವನೆಂಬೆ ನೀನು| ಭೂ ಸುರರ ನಿ|
ರ್ಬಂಧಿಸಿ ಮಾರ್ಗವನು||
ಚಂದವೆ ನಿಶಿಚರರಂದದೊಳಡಗಟ್ಟಿ|
ನಿಂದನುಚಿತ ಗೆಯ್ವುದು||1|| ೧೫
ವಾರಿಯೊಳ್ ವಿಹರಿಸುತ| ನಾವಿರ ಲಿಲ್ಲ|
ಸೇರಿ ಗದ್ದಲ ಗೆಯ್ಯುತ||
ನಾರಿಯರಂಜುವ ಪರಿಗೈದುದ್ಧಟನೀನ
ದಾರೈಯ್ಯ ಕೇಳ್ವವನು||2|| ೧೬

ಮಾರವಿ|ಏಕ|
ಗಂಗೆಯ ತೀರದಿ| ಹಂಗಿಗನಲ್ಲವು|
ತುಂಗ ಪರಾಕ್ರಮನು||
ಹಿಂಗದಿರಲು ನಾ| ಕಂಗೆಡಿಸುವೆ ನಡೆ|
ಭಂಗಿಪೆ ನಿಮ್ಮವನು||1|| ೧೭
ಎಲೆಹುಲು ಮಾನವ| ಇಳೆಯೊಳು ನಮ್ಮನು|
ಕೊಳುಗುಳದೊಳುಗೆಲುವ||
ಬಲುಭಟರುಂಟೇ| ತಿಳಿಯದೆ ಸಾಯುವೆ|
ಕೆಲಸಾರೆಲೊ ಗೊರವ||2|| ೧೮

ನಾಟಿ||ಝಂಪೆ|| + ಕುಸುಮ ಷಟ್ಪದಿ
ಬಂದುದಿದು ದೇವಗುರು
ವಿಂದ ಭಾರದಾಜ
ಮುಂದಗ್ನಿವೇಶ್ಯರಿಂ ಗುರುದ್ರೋಣಗೆ||
ಸಂದ ದಿವ್ಯಾಗ್ನೇಯ
ದೊಂದಿಗಾನೀಗಲನು|
ಸಂಧಾನಗೊಳಿಪೆ ತಾಳೆಂದೆಚ್ಚನು||1|| ೧೯

ಕಾರಿದುದು ಕೆಂಡಮಂ|
ಹಾರಿದಂ ರಥದಿಂದ|
ಚೀರುತುರುಳಲು ಸುಟ್ಟುದ್ಯೈರಥಾಶ್ವ!!||
ಗಾರುಗೆಟ್ಟಿರೆ ಪಿಡಿದು|
ತೋರು ಪೌರುಷವೆನುತ
ಸಾರೆ ಧರ್ಮಜನೆಡೆಗೆ ಪಿಡಿದು ಸೆರೆಯ||2|| ೨೦

ಭಾಮಿನಿ
ಸೆರೆಯ ಪಿಡಿದೆಳತರುತ ಕೆಡಹಲು|
ಪರಮ ತೃಪ್ತಿಯೊಳಿರಲಿಕಾತಂ|
ಗರಸಿ ಕುಂಭೀನಸಿಯು ಧರ್ಮಜನಡಿಗೆ ಕೆಡೆಯುತಲಿ||
ಹರಣ ದಾನವನಿತ್ತು ಪತಿಯಂ|
ಕರುಣಿಸೈ ಹೇ ಕರುಣಿ ರಕ್ಷಿಸು|
ತರಳೆಯೆಂದೀಗೆನ್ನ ಮಾಂಗಲ್ಯವನು ನೀಡೆನಲು||1|| ೨೧

ಕೇದಾರಗೌಳ||ಅಷ್ಟ||
ಬಳಲಬೇಡೇಳಮ್ಮ ಖಳನಂತೆ ಹಮ್ಮಿನಿಂ|
ಕೊಳುಗುಳ ಕಿಳಿದಿಂತಾಯ್ತು||
ಕಳವಳಗೊಳದಿರೀಗಿಳೆಯ ಧರ್ಮವು ಜೀವ|
ಕಳೆವವರಲ್ಲ ನಾವು||1|| ೨೨
ಪಾರ್ಥನಿನ್ನಭಿಮತವೇನೆನೆ ಗಂಧರ್ವ|
ದೂರ್ತನಾಗುತ ಸೋತನು|
ಸ್ವಾರ್ಥವಿಲ್ಲೆಂದಾತನಂ ಬಿಡಿ ನಮಿಸಿಕೃ|
ತಾರ್ಥ ಮಾನಸನೆದ್ದನು||2|| ೨೩
ಬಲವೆಮಗಿರುಳೊಳಗಿಳೆಯೊಳಾರೆದುರಿಲ್ಲ|
ಬಲುವಿಕ್ರಮಿಗಳಾರಯ್ಯ||
ಇಳೆಯಮರರೆ ಕ್ಷತ್ರಿಯರ ರೀತಿ ಕಾಂಬುದು|
ಛಲ ಬಲದೆರಕವೆಂತು||3|| ೨೪

ಸಾಂಗತ್ಯ||ರೂಪಕ||
ಸೋಮ ವಂಶಜರಾವು ಪಾಂಡು ಕುಮಾರರು|
ಭೂಮಿಯಮರವೇಷದಿಂದ||
ಈ ಮಹಿ ಸಂಚಾರ ಗೈಯ್ಯುತ್ತಿಹೆವು ಬಂದೊಂ|
ದಾಮಹಾ ವಿಪದವ ಕಳೆಯೆ||1|| ೨೫
ಮದುವೆಯಾಗುವುದಂತೆ ಮಾಕಂದಿಯೊಳಗೀಗೆಂ|
ಬುದಕೇಳಿ ಬುಧರೊಡಗೂಡಿ||
ಪದುಳದಿಂ ಬೇಗನೆ ತಲುಪಲು ನಿಶಿಯೊಳ್ಗಾ|
ವ್ಯಾದದಿಂದ ನಡೆದೈದುತಿಹೆವು||2|| ೨೬

ಮಧುಮಾಧವಿ||ತ್ರಿವುಡೆ||
ಅರಿತಿಹೆನು ಕುರುವಂಶ ಚರಿತೆಯ|
ಹರನ ಮುಖದಿಂದೊಗೆದ ಕಥನವ|
ಸುರಪ ಮೊದಲಾದಮರ ತೇಜದಿ|
ಧರೆಯೊಳೀಗುದಿಸೀರ್ಪಿರಿ||1|| ೨೭
ತೋಷವಾಂತೆನು ಪಾರ್ಥ ಮನದಲಿ|
ವಾಸಿಗೊಳ್ಳೆನು ತಪದಿ ಪಡೆದ ವಿ|
ಶೇಷ ಶಕ್ತಿಯ ವಿದ್ಯೆಯಂ ಕೊಡು|
ವಾಸೆ ಬಲಿತುದು ಪಡೆವುದು||2|| ೨೮
ಮೂರುಲೋಕದೊಳಾವುದಾದರು|
ತೋರುವುದು ಸಂಸ್ಮರಣೆ ಮಾತ್ರದೊ|
ಳಾರು ತಿಂಗಳ ತಪದ ಚಾಕ್ಷುಷ|
ವೀರಹಸ್ಯದ ವಿದ್ಯೆಯು||3|| ೨೯

ಕೇದಾರಗೌಳ||ಝಂಪೆ||
ಪಡೆಯಲಾರೆನು ವಿದ್ಯೆಯ| ದಾನದಿಂ|
ದೊಡಬಡದು ನಾ ಕ್ಷತ್ರಿಯ||
ನಡೆದಪ್ಪಲಾರೆ ನಾನು| ತಿಳಿದು ವಿಧಿ|
ನಡೆನಿನ್ನ ಲೋಕಕಿನ್ನು||1|| ೩೦

ವಿನಿಮಯಕ್ಕಾಗಿ ಶರವ| ನೀಡಿ ಪಡೆ|
ಘನವಿದ್ಯೆಯಂ ಪಾಂಡವ||
ಅನಿಮಿಷರಿಗೆಣೆಯಾಗುವೆ| ಅಶ್ವಂಗ|
ಳನು ನಾನು ಜೊತೆಗೀಯುವೆ||2|| ೩೧
ವಿದ್ಯೆಯಂ ಪಡೆದಿತ್ತನು| ಆಗ್ನೇಯ|
ದದ್ಭುತದ ಶರವ ನರನು||
ಹೊದ್ದಿದರು ಸ್ನೇಹ ಬಳಿಕ|| ಪೇಳಿದನು|
ಸದ್ಯದೊಳು ಗೆಯ್ವ ಬದುಕ||3|| ೩೨

ಭಾಮಿನಿ
ಪೇಳಿದನು ಸಂವರಣ ಕಥನವ|
ಪಾಲಿಸುವ ಹರಿ ಮೊದಲು ಗುರುವಂ|
ಮೇಳಯಿಸದಿರೆ ಕಷ್ಟಮಪ್ಪುದು ಧೌಮ್ಯ ಮುನಿವರನ||
ಕೇಳುತಾಶ್ರಯಗೊಂಡು ನೀವ್ ಪಾಂ|
ಚಾಲಕೈದಲು ಗೆಲುವ ಪಡೆವಿರಿ||
ಕಾಲಮುಂದನುಕೂಲವಹುದೆಂದವರ ಬೀಳ್ಗೊಂಡ|| ೩೩

ವಾರ್ಧಕ
ಸತ್ಕಥಾ ಶ್ರವಣದ ವಿನೋದದಿಂ ಮೋದದಿಂ|
ದುತ್ಕರ್ಷದಾಸೆ ಭವಿತವ್ಯದ ನಿರೀಕ್ಷೆಯ ವಿ|
ಯತ್ಕಲಾವಿದ ಚಿತ್ರರಥನಿಂದ ಬೀಳ್ಗೊಂಡು ಸೂಳ್ಗೊಂಡು ಮುಂಬರಿಯುತ ||
ಹೃತ್ಕಮಲದೊಳಗಮಲ ಮೂರ್ತಿಯಂ ಸ್ಥಾಪಿಸಿ ಜ|
ಗತ್ಕಾರಣನೆ ಭವದ ತಾರಣನೆ ಸಲಹೆನುತ |
ಸತ್ಕೋಚಮಂ ಬೆಳಸಿ ಗುರುಕರುಣಮನವೆಳಸುತುತ್ಕೋಚಕೈತಂದರು|| ೩೪

ಮಂಗಳ:

ವಿಶ್ವ ನಾಟಕ ಕಟ್ಟಿಯೊಡೆದಾಡಿಸುತ್ತ ಸ |
ರ್ವಸ್ವವಂ ತನ್ನಂಕದೊಳಗಿಟ್ಟು ಮೆರವ|
ವಸ್ತು ವಿನ್ಯಾಸ ಕಥೆ ಕಲ್ಪನೆಯ ತಾಯ್ಗೂಸು|
ಸ್ವಸ್ತಿ ಸರ್ವೇಕ್ಷಣಗೆ ಜಯ ಮಂಗಲಂ| ||1|| ೩೫

*****

ಕೃತಜ್ಞತೆಗಳು

ಅಂತರಜಾಲ ಪ್ರಕಾಶನ ಪ್ರಾಯೋಜಕರು: (ನಿರೀಕ್ಷಿಸಲಾಗಿದೆ)

ಮೂಲ ಪ್ರಕಾಶಕರು: ಶ್ರೀ ದುರ್ಗಾಂಬಾ ಕಲಾಸಂಗಮ, ಶರವೂರು. ದ.ಕ.

ಪ್ರಸಂಗ ಪ್ರತಿ ಆಧಾರ: ಲೇಖಕರ ಹಸ್ತಪ್ರತಿ

ಪ್ರಸಂಗ ಪ್ರತಿ ಕೊಟ್ಟವರು: ಶ್ರೀನಿಧಿ ಡಿ. ಎಸ್.

ಪ್ರಸಂಗ ಪ್ರತಿ ಒದಗಣೆಗೆ ಸಹಕಾರ: ಶ್ರೀನಿಧಿ ಡಿ. ಎಸ್.

ಅಂತರಜಾಲ ಪ್ರತಿ ಬರವಣಿಗೆ: ಶ್ರೀನಿಧಿ ಡಿ. ಎಸ್.

ಅಂತರಜಾಲ ಪ್ರತಿ ತಿದ್ದುಪಡಿ: ಶ್ರೀಧರ್ ಡಿ. ಎಸ್.

ಅಂತರಜಾಲ ಪ್ರತಿ ಉತ್ಪಾದನೆ: ರವಿ ಮಡೋಡಿ, ಡಾ. ಪ್ರದೀಪ ಸಾಮಗ, ನಟರಾಜ ಉಪಾಧ್ಯ

ಅಂತರಜಾಲ ಪ್ರತಿ ಪ್ರಕಾಶನ: ರವಿ ಮಡೋಡಿ, ನಟರಾಜ ಉಪಾಧ್ಯ